ಕರ್ನಾಟಕ ಸರ್ಕಾರ

ನಂ.ಗ್ರಾಅಪ 166 ಗ್ರಾಪಂಅ 2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 29-06-2013.

## ಸುತ್ತೋಲೆ

ವಿಷಯ: ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಬರುವ ಆಸ್ತಿಗಳ ಬಗ್ಗೆ ದೃಢೀಕರಣ ಪತ್ರ, ಸ್ವತ್ತಿನ ಅಳತೆ, ನಕಾಶೆ, ಹಾಗೂ ಚೆಕ್ಕುಬಂದಿಯನ್ನು ಕಂದಾಯ ಇಲಾಖೆಯ ತಹಶೀಲ್ದಾರ್ ರವರಿಂದ ಗ್ರಾಮ ಪಂಚಾಯಿತಿಗಳು ಪಡೆಯುವ ಬಗ್ಗೆ.

ಉಲ್ಲೇಖ:

1. ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ: ಆರ್‌ಡಿ 174 ಮುನೊಮು 2005, ದಿನಾಂಕ: 23-08-2005.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 553 ಗ್ರಾಪಂಅ 2012, ದಿನಾಂಕ: 28-12-2012 ಮತ್ತು 04-01-2013.
3. ನಿರ್ದೇಶಕರು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಅರೆ ಸರ್ಕಾರಿ ಪತ್ರ ಸಂಖ್ಯೆ: ಗ್ರಾಅಪ 83 ಗ್ರಾಪಂಅ 2013 (ಭಾಗ-2) ದಿನಾಂಕ: 02-04-2013.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರಿಗೆ ಬರೆದಿರುವ ಅರೆ ಸರ್ಕಾರಿ ಪತ್ರ ಸಂಖ್ಯೆ: ಗ್ರಾಅಪ 166 ಗ್ರಾಪಂಅ 2013, ದಿನಾಂಕ: 06-05-2013.
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 83 ಗ್ರಾಪಂಅ 2013, ದಿನಾಂಕ: 14-06-2013.
6. ಸರ್ಕಾರದ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸರ್ಕಾರದ ಪ್ರಧಾನ ಕಾರ್ಯದರ್ಶಿ ಮತ್ತು ಸರ್ಕಾರದ ಕಾರ್ಯದರ್ಶಿ ಕಂದಾಯ ಇಲಾಖೆ ರವರಿಗೆ ಬರೆದಿರುವ ಅನಧಿಕೃತ ಟಿಪ್ಪಣಿ ಸಂಖ್ಯೆ: ಗ್ರಾಅಪ 83 ಗ್ರಾಪಂಅ 2013, ದಿನಾಂಕ: 14-06-2013 ಮತ್ತು 19-06-2013.
7. ಸರ್ಕಾರದ ಸೇರ್ಪಡೆ ಸಂಖ್ಯೆ: ಗ್ರಾಅಪ 83 ಗ್ರಾಪಂಅ 2013, ದಿನಾಂಕ: 15-06-2013.
8. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 83 ಗ್ರಾಪಂಅ 2013, ದಿನಾಂಕ: 15-06-2013.

----

ಇ- ಸ್ವತ್ತು ತಂತ್ರಾಂಶದಲ್ಲಿ ನಮೂನೆ 9ಎ ನ್ನು ದಾಖಲಿಸಲು ಮತ್ತು ನಮೂನೆ 9 ಮತ್ತು 11 ನ್ನು ಪಡೆಯಲು ಅನುಸರಿಸಬೇಕಾದ ಕ್ರಮಗಳ ಸಂಪೂರ್ಣ ವಿವರವನ್ನು ನೀಡಲಾಗಿದೆ.

2. ರಾಜ್ಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ 9 ಮತ್ತು 11 ನ್ನು ಹೊರಡಿಸುವ ಸಂಬಂಧ ನಮೂನೆಗಳನ್ನು ಪರಿಷ್ಕರಿಸಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 28 ಮತ್ತು 30 ಕ್ಕೆ

ಸೂಕ್ತ ತಿದ್ದುಪಡಿ ತಂದು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2013 ನ್ನು ದಿನಾಂಕ: 14.06.2013 ಮತ್ತು 15.06.2013 ರಂದು ಉಲ್ಲೇಖ (5) ಮತ್ತು (7) ರಂತೆ ಹೊರಡಿಸಲಾಗಿದೆ. ಅದರಂತೆ ಕಂದಾಯ ಇಲಾಖೆಯಿಂದ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ ಮತ್ತು ನಮೂನೆ 9 ಮತ್ತು 11 ನ್ನು ಇ–ಸ್ವತ್ತು ತಂತ್ರಾಂಶದ ಮೂಲಕ ಆನ್ ಲೈನ್ ಮುಖಾಂತರ ವಿತರಿಸಲು ಈ ತಂತ್ರಾಂಶವನ್ನು ಕಂದಾಯ ಇಲಾಖೆಯ ನೋಂದಣಿ ಮತ್ತು ಮುದ್ರಾಂಕ ತಂತ್ರಾಂಶವಾದ ಕಾವೇರಿ ತಂತ್ರಾಂಶದೊಂದಿಗೆ ಸಂಪರ್ಕ ಏರ್ಪಡಿಸಲು ಕ್ರಮ ವಹಿಸುವಂತೆ ಉಲ್ಲೇಖ (6) ರ ಅನಧಿಕೃತ ಟಿಪ್ಪಣಿಗಳಲ್ಲಿ ಸರ್ಕಾರದ ಕಾರ್ಯದರ್ಶಿ (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸರ್ಕಾರದ ಪ್ರಧಾನ ಕಾರ್ಯದರ್ಶಿ ಮತ್ತು ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ರವರನ್ನು ಈಗಾಗಲೇ ಕೋರಿರುತ್ತಾರೆ.

3. ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ 9 ಮತ್ತು 11 ನ್ನು ಆನ್–ಲೈನ್ ಮೂಲಕ ವಿತರಿಸುವ ಸಲುವಾಗಿ, ಇ–ಸ್ವತ್ತು ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ತಂತ್ರಾಂಶದ ಅನುಷ್ಠಾನವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಜಾರಿಗೊಳಿಸಲಾಗಿದೆ. ಅದರಂತೆ ಈಗಾಗಲೇ ಗ್ರಾಮ ಪಂಚಾಯಿತಿಗಳಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ 9 ಮತ್ತು 11 ನ್ನು ಇ–ಸ್ವತ್ತು ತಂತ್ರಾಂಶದ ಮೂಲಕ ಮಾತ್ರ ವಿತರಿಸತಕ್ಕದ್ದಾಗಿದೆ. ಕೈಬರಹದ ಮುಖಾಂತರ ಹಾಗೂ ಹಳೆಯ ನಮೂನೆಯಲ್ಲಿ ನಮೂನೆ 9 ಮತ್ತು 11 ನ್ನು ವಿತರಿಸುವ ಪದ್ಧತಿಯನ್ನು ಈಗಾಗಲೇ ರದ್ದುಗೊಳಿಸಲಾಗಿದೆ ಮತ್ತು ಈ ತಂತ್ರಾಂಶದ ಉಪಯೋಗದಲ್ಲಿನ ಯಾವುದೇ ಅಡಚಣೆಗಳ ನೆಪದಿಂದ ಕಾರ್ಯಕ್ರಮದ ಯಶಸ್ವಿ ಅನುಷ್ಠಾನದಲ್ಲಿ ಅಡ್ಡಿಯಾಗದಂತೆ ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಸಂಬಂಧಿಸಿದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳದ್ದಾಗಿರುತ್ತದೆ. ಇದಲ್ಲದೆ ಈ ತಂತ್ರಾಂಶದ ಅನುಷ್ಠಾನದ ಹಿನ್ನೆಲೆಯಲ್ಲಿ, ಸಾರ್ವಜನಿಕರಿಗೆ ಯಾವುದೇ ರೀತಿಯ ಸೌಲಭ್ಯದಿಂದ ವಂಚಿತರಾಗದಂತೆ ಕ್ರಮ ವಹಿಸುವಂತೆ ಉಲ್ಲೇಖ (8) ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

4. ಯಾವುದೇ ನಾಗರೀಕನು ತನ್ನ ಆಸ್ತಿಗಾಗಿ ನಮೂನೆ 9 ಮತ್ತು 11 ನ್ನು ಕೇಳಿದಾಗ ಸದರಿ ಆಸ್ತಿಯು ಅಧಿಕೃತವಾದದ್ದೇ ಅಥವಾ ಅಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಲು ಉಲ್ಲೇಖ (2) ರ ಸರ್ಕಾರದ ಸುತ್ತೋಲೆಗಳಲ್ಲಿ ವಿವರಿಸಲಾಗಿದೆ. ಅದರಲ್ಲಿ ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಬರುವ ಆಸ್ತಿಯು ಒಂದಾಗಿದ್ದು, ಅದಕ್ಕಾಗಿ ಗ್ರಾಮ ಪಂಚಾಯಿತಿಗಳು ನಮೂನೆ 9 ಮತ್ತು 11 ನ್ನು ನೀಡಬೇಕಾದ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮದ ಬಗ್ಗೆ ವಿವರಿಸಲಾಗಿದೆ. ಅದನ್ನು ಮುಂದುವರೆಸುತ್ತಾ ಈ ಕೆಳಕಂಡ ವಿವರಗಳನ್ನು ಮತ್ತೆ ಪುನರುಚ್ಚರಿಸಲಾಗಿದೆ.

5. ಕರ್ನಾಟಕ ಭೂ ಕಂದಾಯ ಕಾಯಿದೆ, 1964 ಪ್ರಕರಣ 152 ಮತ್ತು ಇದರಡಿ ರಚಿತವಾದ ಕರ್ನಾಟಕ ಭೂಕಂದಾಯ ನಿಯಮಾವಳಿ, 1996, ಇದರ ಅಧ್ಯಾಯ 12 ರಡಿಯಲ್ಲಿ ತಿಳಿಸಿರುವಂತೆ ಕೃಷಿಯೇತರ ಜಮೀನಿನಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯ ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆಯು ಪಟ್ಟಣಗಳಲ್ಲಾಗಲಿ, ನಗರಗಳಲ್ಲಾಗಲಿ, ಅಥವಾ ಹಳ್ಳಿಗಳಲ್ಲಾಗಲಿ ಈ ಕರ್ತವ್ಯವನ್ನು ನಿರ್ವಹಿಸುವ ಜವಾಬ್ದಾರಿ ಹೊಂದಿರುತ್ತದೆ. ಆದ್ದರಿಂದ ಕೃಷಿಯೇತರ ಜಮೀನಿನಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಕಂದಾಯ ಇಲಾಖೆಯೇ ನಿರ್ವಹಿಸಬೇಕಾಗುತ್ತದೆ ಮತ್ತು ಕಂದಾಯ ಇಲಾಖೆಯು ಇದರ ಉಸ್ತುವಾರಿಯನ್ನು ಇದುವರೆವಿಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಸ್ತಾಂತರಿಸಿರುವುದಿಲ್ಲ.

6. ಕಂದಾಯ ಇಲಾಖೆಯು ದಿನಾಂಕ: 23.08.2005 ರಂದು ಹೊರಡಿಸಿರುವ ಉಲ್ಲೇಖ (1) ರ ಸುತ್ತೋಲೆಯಲ್ಲಿ ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆಯ ಅನುಸಾರ ಒಂದು ಗ್ರಾಮ ಠಾಣಾ ನಿವೇಶನ ಅಥವಾ ಕಟ್ಟಡ ಇರುವ ನಿವೇಶನವನ್ನು ಕಂದಾಯ ಇಲಾಖೆಯ ಗ್ರಾಮ ಲೆಕ್ಕಿಗನು ಗ್ರಾಮ ಠಾಣಾದ ಸರಹದ್ದುಗಳನ್ನು ಒಳಗೊಂಡ ಕಚ್ಚಾ ನಕಾಶೆಯೊಂದಿಗೆ (Rough Sketch) ದೃಢೀಕರಿಸುವಂತೆ ತಿಳಿಸಿದೆ.

7. ಗ್ರಾಮ ಪಂಚಾಯಿತಿಗಳು ನಾಗರೀಕನು ಗ್ರಾಮ ಠಾಣಾ ಆಸ್ತಿ ಎಂದು ಹೇಳಿ ಅದಕ್ಕೆ ಸಂಬಂಧಿಸಿದಂತೆ ನಮೂನೆ-9 (ತೆರಿಗೆ ನಿರ್ಧಾರಣೆ ಪಟ್ಟಿ) ನ್ನು ಕೋರಿದಾಗ ಸದರಿ ಸ್ವತ್ತು ಗ್ರಾಮ ಠಾಣಾ ಒಳಗೆ ಬರುತ್ತದೆಯೇ ಅಥವಾ ಇಲ್ಲವೆ ಎಂದು ದೃಢೀಕರಿಸಲು ಗ್ರಾಮ ಪಂಚಾಯಿತಿಗೆ ಯಾವುದೇ ಆಧಾರ ಇರುವುದಿಲ್ಲ. ಕಾರಣ ಕರ್ನಾಟಕ ಭೂ ಕಂದಾಯ ಕಾಯಿದೆ, 1964 ರ ಪ್ರಕರಣ 62 ರಡಿಯಲ್ಲಿ ಗ್ರಾಮ ಲೆಕ್ಕಾಧಿಕಾರಿಗೆ ಎಲ್ಲಾ ಆಸ್ತಿ ಮತ್ತು ಭೂ ದಾಖಲೆಗಳನ್ನು ನಿರ್ವಹಣೆ ಮಾಡುವ ಅಧಿಕಾರ ನೀಡಲಾಗಿದೆ. ಆದುದರಿಂದ ಗ್ರಾಮ ಪಂಚಾಯಿತಿಯಲ್ಲಿ ಅಂತಹ ಅರ್ಜಿ ಸ್ವೀಕರಿಸಿದ ತಕ್ಷಣ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಅನುಬಂಧ-1 ರಲ್ಲಿರುವಂತೆ ಅರ್ಜಿದಾರನಿಗೆ ಹಿಂಬರಹ ನೀಡಲು ಸೂಚಿಸಿದೆ. ಮುಂದುವರೆದು ಸದರಿ ಸ್ವತ್ತು ಗ್ರಾಮ ಠಾಣಾದೊಳಗೆ ಬರುತ್ತದೆ ಅಥವಾ ಇಲ್ಲವೇ, ಗ್ರಾಮ ಠಾಣಾದೊಳಗೆ ಬಂದಲ್ಲಿ ಅದನ್ನು ದೃಢೀಕರಿಸಿ, ಸ್ವತ್ತಿನ ನಕಾಶೆ, ಅಳತೆ ಮತ್ತು ಚೆಕ್ಕುಬಂದಿಯೊಂದಿಗೆ ನೀಡಲು ಸಂಬಂಧಪಟ್ಟ ತಹಶೀಲ್ದಾರ್‌ರವರನ್ನು ಕೋರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅನುಬಂಧ-2 ರಲ್ಲಿರುವ ನಮೂನೆಯಲ್ಲಿ ಸಂಬಂಧಪಟ್ಟ ತಹಶೀಲ್ದಾರರಿಗೆ ಕೋರಿಕೆ ಸಲ್ಲಿಸಬೇಕು. ಈ ಅನುಬಂಧದಲ್ಲಿ ಇರುವ ನಮೂನೆಗಳನ್ನು ಯಾವುದೇ ಕಾರಣಕ್ಕೂ ಬದಲಾಯಿಸಬಾರದು.

8. ಗ್ರಾಮ ಠಾಣಾ ಎಂದು ಹೇಳುವ ಸ್ವತ್ತುಗಳಿಗೆ ಸಂಬಂಧಿಸಿದಂತೆ ಬಂದಿರುವ ನಮೂನೆ 9 ರ ಅರ್ಜಿಗಳ ವಿವರಗಳು ಮತ್ತು ಇದಕ್ಕೆ ಸಂಬಂಧಿಸಿದಂತೆ ಸಂಬಂಧಿಸಿದ ತಹಶೀಲ್ದಾರರುಗಳಿಗೆ ಬರೆದಿರುವ ಪತ್ರದ ವಿವರಗಳನ್ನು ಗ್ರಾಮ ಪಂಚಾಯಿತಿಯು ಸ್ವೀಕೃತಿ ಮತ್ತು ರವಾನೆ ಪುಸ್ತಕದಲ್ಲಿ ನಮೂದಿಸಿ ಕಡ್ಡಾಯವಾಗಿ ನಿರ್ವಹಿಸತಕ್ಕದ್ದು. ಇದು ಕಡ್ಡಾಯವಾಗಿರುತ್ತದೆ.

9. ಒಂದು ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಇರುವ ಬಗ್ಗೆ ವಿವರಗಳನ್ನು ಕಂದಾಯ ಇಲಾಖೆಯು ಒದಗಿಸಬೇಕಾಗಿರುವುದು ಶಾಸನಬದ್ಧ ಕರ್ತವ್ಯವಾಗಿರುವುದರಿಂದ ಗ್ರಾಮ ಠಾಣಾ ಸ್ಕೆಚ್‌ನ್ನು ಕಂದಾಯ ಇಲಾಖೆಯು ಸಕಾಲ ಸೇವೆಯಡಿ ಒದಗಿಸಲು ಕೂಡಲೇ ಕ್ರಮ ವಹಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಉಲ್ಲೇಖ (4) ರ ಅರೆ ಸರ್ಕಾರಿ ಪತ್ರದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರನ್ನು ಈಗಾಗಲೇ ಕೋರಿರುತ್ತಾರೆ.

10. ಕೆಲವು ಗ್ರಾಮ ಪಂಚಾಯಿತಿಗಳು ಸ್ವತ: ಗ್ರಾಮ ಠಾಣಾ ನಕಾಶೆಯ ಆಧಾರದ ಮೇಲೆ ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಬಾರದಿರುವ ಆಸ್ತಿಗಳನ್ನು ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಬರುವ ಆಸ್ತಿಗಳೆಂದು ಪರಿಗಣಿಸಿ ನಮೂನೆ 9 ನ್ನು ನೀಡಿ ಅನಧಿಕೃತವಾಗಿ ಆಸ್ತಿಗಳ ನೋಂದಣಿಯನ್ನು ವ್ಯಾಪಕವಾಗಿ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಇದರಿಂದ ಅನಧಿಕೃತ ಆಸ್ತಿಗಳ ನೋಂದಣಿಯಾಗುತ್ತಿರುವುದು ಕಂಡು ಬರುತ್ತದೆ. ಗ್ರಾಮ ಪಂಚಾಯಿತಿಗಳು ಯಾವುದೇ ಕಾರಣಕ್ಕೂ ಕಂದಾಯ ಇಲಾಖೆಯ ತಹಶೀಲ್ದಾರ್ ರವರಿಂದ ಗ್ರಾಮ ಠಾಣಾ ವ್ಯಾಪ್ತಿಯೊಳಗಿನ ಆಸ್ತಿಗೆ ಸಂಬಂಧಿಸಿದ ಸ್ವತ್ತಿನ ವಿವರವನ್ನು ಅನುಬಂಧ-2 ರಲ್ಲಿರುವಂತೆ ಪಡೆಯದೆ ನಮೂನೆ 9 ನ್ನು ನೀಡತಕ್ಕದ್ದಲ್ಲ. ಅನುಬಂಧ-2 ರಲ್ಲಿರುವಂತೆ ಗ್ರಾಮ ಠಾಣಾ ವ್ಯಾಪ್ತಿಯೊಳಗಿನ ಆಸ್ತಿಗೆ ಸಂಬಂಧಿಸಿದ ಸ್ವತ್ತಿನ ವಿವರವನ್ನು ಪಡೆದ ನಂತರ ನಿಯಾಮನುಸಾರ ಪರಿಶೀಲಿಸಿ ನಮೂನೆ 9 ನ್ನು ನೀಡಲು ಕ್ರಮ ವಹಿಸತಕ್ಕದ್ದು.

11. ಗ್ರಾಮ ಠಾಣಾ ಆಸ್ತಿಗಳಿಗೆ ನಮೂನೆ 9 ನ್ನು ನೀಡುವ ಕೋರಿಕೆಗಳು ಬಂದಾಗ್ಗ ದೃಢೀಕರಣ ಪತ್ರ, ಸ್ವತ್ತಿನ ಅಳತೆ, ನಕಾಶೆ, ಹಾಗೂ ಚೆಕ್ಕುಬಂದಿ ಆಸ್ತಿಗಳಿಗೆ ಗ್ರಾಮ ಠಾಣಾ ಸ್ಕೆಚ್‌ನ್ನು ಕಂದಾಯ ಇಲಾಖೆಯು ಗ್ರಾಮ ಪಂಚಾಯಿತಿಗಳಿಗೆ ಒದಗಿಸಲು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾಧಿಕಾರಿಗಳೊಂದಿಗೆ ಮತ್ತು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಬಂಧಿಸಿದ ತಾಲ್ಲೂಕುಗಳ ತಹಸೀಲ್ದಾರರುಗಳೊಂದಿಗೆ ಪರಸ್ಪರ ಸಹಕಾರದೊಂದಿಗೆ ಸಮನ್ವಯ ಸಾಧಿಸತಕ್ಕದ್ದು.

12. ಮೇಲ್ಕಂಡಂತೆ ಕ್ರಮ ವಹಿಸಲು ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದೆ.

29/6/13
(ಡಾ: ಎಂ.ಆರ್. ಏಕಾಂತಪ್ಪ)
ನಿರ್ದೇಶಕರು (ಪಂ.ರಾಜ್) ಹಾಗೂ
ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

<u>ಗೆ:</u>

೧) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.

೨) ಆಯುಕ್ತರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು.

೩) ಎಲ್ಲಾ ಜಿಲ್ಲಾಧಿಕಾರಿಗಳು,

೪) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,

೫) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.

೬) ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರುಗಳು.

೭) ಎಲ್ಲಾ ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿಗಳ ಮುಖಾಂತರ.

೮) ಸಂಪಾದಕರು ಕರ್ನಾಟಕ ವಿಕಾಸ ಪತ್ರಿಕೆ/ವೆಬ್ ಸೈಟ್, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.

೯) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

## ಅನುಬಂಧ–1

______________ ಗ್ರಾಮ ಪಂಚಾಯತಿ ಕಾರ್ಯಾಲಯ

______________________ ತಾಲ್ಲೂಕು ______________________ ಜಿಲ್ಲೆ

---

ಸಂಖ್ಯೆ: ದಿನಾಂಕ:

**ಹಿಂಬರಹ**

ವಿಷಯ: ಗ್ರಾಮ ಠಾಣಾ ವ್ಯಾಪ್ತಿಯೊಳಗಿನ ಆಸ್ತಿಗೆ ನಮೂನೆ–9 ನೀಡುವ/ ಬದಲಾವಣೆ ಮಾಡುವ ಬಗ್ಗೆ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ / ಶ್ರೀ __________ ಬಿನ್/ ಕೋಂ__________ಗ್ರಾಮ __________ ತಾಲ್ಲೂಕು ಆದ ನೀವು ಗ್ರಾಮ ಠಾಣಾ ವ್ಯಾಪ್ತಿಯೊಳಗಿನ ಆಸ್ತಿಗೆ ನಮೂನೆ–9 ನೀಡುವ/ ಬದಲಾವಣೆ ಮಾಡುವ ಬಗ್ಗೆ ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಲಾಗಿದೆ. ತಮ್ಮ ಆಸ್ತಿಯು ನಿಮ್ಮ ಪ್ರಕಾರ ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಬರುವುದಾಗಿ ತಿಳಿಸಿರುತ್ತೀರಿ. ನಿಮ್ಮ ಆಸ್ತಿಯು ಗ್ರಾಮ ಠಾಣಾ ವ್ಯಾಪ್ತಿಯೊಳಗೆ ಬರುವ ಬಗ್ಗೆ ಸಂಬಂಧಿಸಿದ ತಹಶೀಲ್ದಾರ್ ರವರು ಪರಿಶೀಲಿಸಿ ಗ್ರಾಮಠಾಣಾ ಒಳಗೆ ಬಂದಲ್ಲಿ ಅದನ್ನು ದೃಢೀಕರಿಸಿ ನಿಮ್ಮ ಸ್ವತ್ತಿನ ಚೆಕ್ಕುಬಂಧಿ ಸಮೇತ ವಿಸ್ತೀರ್ಣದೊಂದಿಗೆ ಸ್ಕೆಚ್ಚನ್ನು ನಮ್ಮ ಕಛೇರಿಗೆ ಒದಗಿಸಿದ ನಂತರ ನಿಮ್ಮ ಆಸ್ತಿಗೆ ನಮೂನೆ–9 ನೀಡುವ / ಬದಲಾವಣೆ ಮಾಡುವ ಬಗ್ಗೆ ನಿಯಮಾನುಸಾರ ಮುಂದಿನ ಕ್ರಮ ವಹಿಸಲಾಗುವುದೆಂದು ತಿಳಿಯುವುದು.

ಪಂಚಾಯತಿ ಅಭಿವೃದ್ಧಿ ಅಧಿಕಾರಿ

______________ ಗ್ರಾಮ ಪಂಚಾಯತಿ

______________ ತಾಲ್ಲೂಕು

ಶ್ರೀಮತಿ / ಶ್ರೀ ______________

ಬಿನ್ / ಕೋಂ______________

______________ ಗ್ರಾಮ

______________ ತಾಲ್ಲೂಕು

## ಅನುಬಂಧ-2

### ______________ ಗ್ರಾಮ ಪಂಚಾಯತಿ ಕಾರ್ಯಾಲಯ

### ______________________ ತಾಲ್ಲೂಕು ______________________ ಜಿಲ್ಲೆ

---

ಸಂಖ್ಯೆ: ದಿನಾಂಕ:

ಗೆ,

ತಹಶೀಲ್ದಾರ್ ರವರು,

____________ ತಾಲ್ಲೂಕು

____________ ಜಿಲ್ಲೆ.

ವಿಷಯ: ____________ ಠಾಣಾ ವ್ಯಾಪ್ತಿಯೊಳಗಿನ ಆಸ್ತಿಗೆ ಸಂಬಂಧಿಸಿದ ಸ್ವತ್ತಿನ ಬಗ್ಗೆ.

ಉಲ್ಲೇಖ: ಶ್ರೀಮತಿ/ಶ್ರೀ __________ರವರ ಅರ್ಜಿ ಸಂಖ್ಯೆ________ ಮತ್ತು ಸಕಾಲ ಅರ್ಜಿ ಸ್ವೀಕೃತಿ ಸಂಖ್ಯೆ________

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀಮತಿ / ಶ್ರೀ ___________ ಬಿನ್/ ಕೋಂ__________ಗ್ರಾಮ __________ ತಾಲ್ಲೂಕು ಇವರು ___________ ಗ್ರಾಮ ಪಂಚಾಯತಿ ವ್ಯಾಪ್ತಿಯ __________ ಗ್ರಾಮದಲ್ಲಿ ಗ್ರಾಮ ಠಾಣಾ ವ್ಯಾಪ್ತಿಯೊಳಗಿನ ಆಸ್ತಿಗೆ ಸಂಬಂಧಿಸಿದಂತೆ ನಿವೇಶನ/ಕಟ್ಟಡದಲ್ಲಿ ಮಾಲೀಕತ್ವ/ ಅನುಭವದಲ್ಲಿದ್ದು, ನಮೂನೆ-9 ನೀಡುವ/ ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಗ್ರಾಮಕ್ಕೆ ಸೇರಿದ ಗ್ರಾಮ ಠಾಣಾ ಸ್ಕೆಚ್‌ನ್ನು ಈ ಕೆಳಗಿನಂತೆ ಒದಗಿಸುವಂತೆ ಕೋರಿದೆ.

1. ಸದರಿ ಆಸ್ತಿಯು ಗ್ರಾಮಠಾಣಾ ವ್ಯಾಪ್ತಿಯೊಳಗೆ ಬರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ದೃಢೀಕರಿಸುವುದು.

   ಗ್ರಾಮಠಾಣಾ ಒಳಗೆ ಬಂದಲ್ಲಿ –

   ಅ. ಸ್ವತ್ತಿನ ವಿಸ್ತೀರ್ಣ ದೃಢೀಕರಿಸಿ ಸ್ಕೆಚ್‌ನ್ನು ಒದಗಿಸುವುದು.

   ಆ. ಸ್ವತ್ತಿನ ಚೆಕ್ಕುಬಂದಿ ನೀಡುವುದು.

   ಇ. ಸ್ವತ್ತಿನ ವಿಸ್ತೀರ್ಣ ನೀಡುವುದು._

ತಹಶೀಲ್ದಾರ್ ರವರು ಮೇಲಿನ ಸ್ವತ್ತಿಗೆ ಸಂಬಂಧಪಟ್ಟಂತೆ ಈ ಎಲ್ಲಾ ವಿವರಗಳನ್ನು ಆದ್ಯತೆ ಮೇಲೆ ಕಳುಹಿಸಿಕೊಡಲು ಕೋರಿದೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿ

______________ ಗ್ರಾಮ ಪಂಚಾಯತಿ

______________ ತಾಲ್ಲೂಕು